# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಆರ್‌ಎಸ್‌ಎಸ್‌ನ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್‌ರವರು, ಕಮಲೇಶ್ ಪಟೇಲ್‌ರವರು ತೃತೀಯ ವರ್ಷದ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭಕ್ಕೂ ಮುನ್ನ ನಾಗಪುರದ ಸ್ಮೃತಿ ಮಂದಿರದಲ್ಲಿ ಆರ್‌ಎಸ್‌ಎಸ್‌ನ ಸ್ಥಾಪಕರಾದ ಶ್ರೀ ಕೇಶವ ಬಲಿರಾಂ ಹೆಡ್ಗೆವಾರ್‌ರಿಗೆ ಹಾಗೂ ಸ್ಮೃತಿ ಚಿಹ್ನದಲ್ಲಿ ಎರಡನೆಯ ಸರಸಂಘಚಾಲಕರಾದ ಶ್ರೀ ಗುರೂಜಿಯವರಿಗೆ ನಮನ ಸಲ್ಲಿಸಿದರು.


ಸಂಪುಟ : 44 | ಸಂಚಿಕೆ : 5 | ಶುಭಕೃತ್ – ಜ್ಯೇಷ್ಠ | ಕಲಿಯುಗಾಬ್ದ 5124 | 15-06-2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಪಠ್ಯಪುಸ್ತಕ ಶಿಕ್ಷಣದ ದೀವಿಗೆಯಾಗಲಿ


ಪ್ರತಿ ಸಮಾಜಕ್ಕೂ ಶಿಕ್ಷಣವೆಂಬುದು ಮೂಲಭೂತ ಅಗತ್ಯ. ತಮ್ಮ ಮುಂದಿನ ಪೀಳಿಗೆಯನ್ನು ಅತ್ಯಂತ ಸಮರ್ಥವಾಗಿ ರೂಪಿಸುವ ಮಾಧ್ಯಮವೇ ಶಿಕ್ಷಣ. ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದಾಗ ಪಠ್ಯಪುಸ್ತಕಗಳು ಶಿಕ್ಷಣದ ದೃಷ್ಟಿಯಿಂದ ಅಲ್ಲದೆ ವಿವಾದದ ದೃಷ್ಟಿಯಿಂದ ಕೇಂದ್ರವಾಗಿ ಬದಲಾಗುತ್ತಿದೆ. ಅಲ್ಲಿ ಮಕ್ಕಳಿಗೆ ಶ್ರೇಷ್ಠ ವಿಚಾರಗಳನ್ನು ತಿಳಿಸುವ ಉದ್ದೇಶಕ್ಕಿಂತಲೂ ಅನೇಕ ಬಾರಿ ತಮ್ಮ ವಿಚಾರಧಾರೆಯನ್ನು ಎಳೆಯ ತಲೆಗಳೊಳಗೆ ತುಂಬಿಸುವ ಉಮ್ಮೇದಿ ಆರಂಭವಾಗಿದೆ.

ಈ ನಿಟ್ಟಿನಲ್ಲಿ ಶಿಕ್ಷಣ ತಜ್ಞರಾಗಿದ್ದ ಮುಡಂಬಡಿತ್ತಾಯ ಅವರ ನೇತೃತ್ವದಲ್ಲಿ ರಚನೆಯಾಗಿದ್ದ ಸಮಿತಿ ಪಠ್ಯಪುಸ್ತಕಗಳನ್ನು ಬರೆದಿತ್ತು. ಅದನ್ನು ಸಿದ್ಧರಾಮಯ್ಯನವರು ಅಧಿಕಾರಕ್ಕೆ ಬಂದಾಗ ಎಡಪಂಥೀಯ ಚಿಂತಕರಾದ ಪ್ರೊ. ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಒಂದು ತಂಡವನ್ನು ಮಾಡಿ ಅವರಿಗೆ ಪಠ್ಯಪುಸ್ತಕಗಳನ್ನು ಪರಿಷ್ಕಾರ ಮಾಡುವ ಕೆಲಸವನ್ನು ವಹಿಸಲಾಯಿತು.

ಆದರೆ ಕನ್ನಡ, ಸಮಾಜ ವಿಜ್ಞಾನವನ್ನೂ ಸೇರಿದಂತೆ ಅನೇಕ ವಿಷಯಗಳ ಪಠ್ಯಪುಸ್ತಕಗಳು ಎಡಪಂಥೀಯ ವಿಚಾರಧಾರೆಯ ಪ್ರಣಾಳಿಕೆಗಳಂತೆ ರೂಪುಗೊಂಡವು. ಎಡ ಚಿಂತನೆಯ ಸಾಹಿತಿಗಳು ಬರೆದ ಪಾಠಗಳು ಪಠ್ಯದ ತುಂಬೆಲ್ಲ ರಾರಾಜಿಸತೊಡಗಿದಾಗ ನಂತರದಲ್ಲಿ ರೋಹಿತ್ ಚಕ್ರತೀರ್ಥ ಅವರ ಸಮಿತಿಯನ್ನು ರಚಿಸಿ ಬರಗೂರು ರಾಮಚಂದ್ರಪ್ಪನವರು ಪರಿಷ್ಕರಣೆ ನಡೆಸಿದ್ದ ಪಠ್ಯಗಳನ್ನು ಪುನರ್ ಪರಿಶೀಲನೆ ನಡೆಸಲು ಸರಕಾರವು ಆದೇಶಿಸಿತು.

ಈ ನಿಟ್ಟಿನಲ್ಲಿ ಪುನರ್ ಪರಿಷ್ಕರಣೆ ನಡೆಸಿದ ಪಠ್ಯದ ಕುರಿತು ಅನೇಕ ಅಸತ್ಯವಾದ ಮಾತುಗಳು, ಅಸಮಾಧಾನಗಳು ಹರಿದಾಡತೊಡಗಿದವು. ಮೊದಲಿಗೆ ಪಠ್ಯದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪಕರಾದ ಕೇಶವ ಬಲಿರಾಮ್ ಹೆಡ್ಗೇವಾರ್ ಅವರ ಕುರಿತಾದ ಪಠ್ಯ ಸೇರಿಸಿದೆ ಎಂದೂ, ಕೇಸರೀಕರಣವೆಂದೂ ಹುಯಿಲೆಬ್ಬಿಸಲಾಯಿತು. ಆದರೆ ನಂತರದಲ್ಲಿ ಅದು ಶ್ರೀ ಹೆಡ್ಗೇವಾರ್ ಅವರ ಕುರಿತಾದ ಪಾಠವಲ್ಲ, ಬದಲಾಗಿ ಅವರ ಭಾಷಣದ ಸಾರಾಂಶ ಎಂಬುದು ತಿಳಿದುಬಂದಾಗ ವಿವಾದ ತಣ್ಣಗಾಯಿತು.

ಆದರೆ ಈ ಪುನರ್ ಪರಿಷ್ಕರಣೆಯ ವಿರುದ್ಧ ಅನೇಕ ಎಡಪಂಥೀಯ ದೃಷ್ಟಿಕೋನದ ಬುದ್ಧಿಜೀವಿಗಳ ಸೊಲ್ಲು ಅಲ್ಲಿಗೇ




ನಿಲ್ಲಲಿಲ್ಲ. ನಂತರ ಕುವೆಂಪು ಅವರ ಪಾಠಗಳನ್ನು ಕೈಬಿಡಲಾಗಿದೆ ಎಂಬ ಹೊಸ ವಿವಾದವನ್ನೂ ಎಬ್ಬಿಸಲಾಯಿತು. ಕುವೆಂಪು ಅವರ ಪಾಠಗಳನ್ನು ತೆಗೆದುಹಾಕಿಲ್ಲ ಬದಲಾಗಿ ಕಿಂದರಿ ಜೋಗಿ ಮುಂತಾದ ಅನೇಕ ಹೊಸ ಪಾಠಗಳನ್ನು ಸೇರಿಸಲಾಗಿದೆ ಎಂಬುದು ಸ್ಪಷ್ಟಪಡಿಸಿದಾಗ ಆ ವಿವಾದವೂ ತಲೆಕೆಳಗಾಗಿ ಮಕಾಡೆ ಮಲಗಿತು. ಕುವೆಂಪು ಅವರ ಪಾಠಗಳನ್ನು ಬರಗೂರು ರಾಮಚಂದ್ರಪ್ಪನವರ ನೇತೃತ್ವದ ಸಮಿತಿಯಲ್ಲಿ ಇದ್ದುದಕ್ಕಿಂತಲೂ ಹೆಚ್ಚಾಗಿ ಅಳವಡಿಸಲಾಗಿದೆ ಎಂಬುದನ್ನು ಸ್ಪಷ್ಟವಾದ ನಂತರ ವಿವಾದ ಅಲ್ಲಿಂದ ಬೇರೆಯ ತಿರುವು ಪಡೆಯಿತು. ಸಮಿತಿಯ ಅಧ್ಯಕ್ಷರಾದ ರೋಹಿತ್ ಚಕ್ರತೀರ್ಥ ಅವರನ್ನು ಕುವೆಂಪು ವಿರೋಧಿ ಎಂಬಂತೆ ಬಿಂಬಿಸುವ ಪ್ರಯತ್ನಗಳೂ ನಡೆಯಿತು.

ಆನಂತರ ಭಗತ್‌ಸಿಂಗ್ ಅವರ ಪಠ್ಯವನ್ನು ಕೈಬಿಡಲಾಗಿದೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಯಿತು. ಅನೇಕ ಎಡಪಂಥೀಯ ಸಂಘಟನೆಗಳು ವಿದ್ಯಾರ್ಥಿ ಸಮುದಾಯವನ್ನೂ ಸರಕಾರದ ವಿರುದ್ಧ ಎತ್ತಿಕಟ್ಟುವ ಪ್ರಯತ್ನವನ್ನೂ ನಡೆಸಿದವು. ಆದರೆ ಭಗತ್‌ಸಿಂಗ್ ಪಾಠ ಕೈಬಿಡದೆ ಸುಖದೇವ್, ರಾಜಗುರು ಅವರ ಪಾಠಗಳನ್ನೂ ಸೇರಿಸಲಾಗಿದೆ ಎಂದಾಗ ಅದೂ ತಣ್ಣಗಾಯಿತು. ಇದೇ ರೀತಿ ಬಸವಣ್ಣನವರ ವಚನಗಳ ಬಗೆಗೂ ವಿವಾದ ಸೃಷ್ಟಿಸಲಾಯಿತು. ಅನೇಕ ಮಂದಿ ಮಠಾಧೀಶರೂ ಕೂಡ ಈ ಕುರಿತು ದನಿ ಎತ್ತಿದರು. ಆದರೆ ಸ್ಪಷ್ಟೀಕರಣದ ನಂತರ ಅದೂ ಕೂಡ ತಣ್ಣಗಾಯಿತು.

ವಿವಾದಗಳ ಮೇಲೆ ವಿವಾದಗಳನ್ನು ಎಬ್ಬಿಸಿದ ತಥಾಕಥಿತ ಬುದ್ಧಿಜೀವಿಗಳಿಗೆ ವಿಚಾರಕ್ಕಿಂತಲೂ ಹೆಚ್ಚಾಗಿ ವಿವಾದಗಳಿಗೆ ಪಠ್ಯಪುಸ್ತಕಗಳನ್ನು ಒಡ್ಡಿದ್ದು ನಿಜಕ್ಕೂ ಶಿಕ್ಷಣ ಲೋಕದ ದುರಂತವೇ ಸರಿ. ಅಷ್ಟಕ್ಕೇ ನಿಲ್ಲದ ಆ ನಾಟಕವು ಸರಕಾರೀ ಸಂಸ್ಥೆಗಳಿಗೆ ನೇಮಕವಾಗಿದ್ದರಿಂದ ರಾಜೀನಾಮೆ ಪ್ರಹಸನಗಳು ಮತ್ತು ತಮ್ಮ ಪಾಠಗಳನ್ನು ಪಠ್ಯದಲ್ಲಿ ಅಳವಡಿಸದೆ ಇರುವುದರ ಕುರಿತಾಗಿ ಮನವಿ ಮಾಡಿಕೊಳ್ಳುವ ಮೂಲಕ ಮತ್ತೆ ಪಠ್ಯಪುಸ್ತಕದಲ್ಲಿ ಗೊಂದಲ ಸೃಷ್ಟಿಸಲು ಆರಂಭಿಸಿದರು.

ಆದರೆ ಸದ್ಯ ಶಿಕ್ಷಣ ಸಚಿವರಾದ ಬಿ.ಸಿ. ನಾಗೇಶ್ ಅವರು ಪುನರ್ ಪರಿಷ್ಕೃತವಾದ ಪಠ್ಯವನ್ನೇ ಶಾಲೆಗಳಿಗೆ ವಿತರಿಸಲಾಗುವುದು ಎಂದಿದ್ದಾರೆ. ಸದ್ಯ ಪುನರ್ ಪರಿಷ್ಕರಣ ಸಮಿತಿಯು ಕಾರ್ಯ ಮುಗಿಸಿದ ತರುವಾಯು ವಿಸರ್ಜನೆಗೊಂಡಿದೆ. ಹಾಗೂ ಸಾಮಾಜಿಕ ನ್ಯಾಯಕ್ಕೆ ಅನುಗುಣವಾಗಿ ಅಗತ್ಯವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಸರಕಾರ ಸಿದ್ಧವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೂ ಹೇಳಿದ್ದಾರೆ.

ಶಿಕ್ಷಣದ ಗುಣಮಟ್ಟ, ಪಠ್ಯದಲ್ಲಿನ ವಿಚಾರ, ಅದರ ಮೌಲ್ಯ, ಮಕ್ಕಳ ಬೌದ್ಧಿಕ ಶಕ್ತಿಗೆ ಕೊಡುಗೆ, ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ನಡೆಯಬೇಕಾಗಿದ್ದ ಶಿಕ್ಷಣ ಸಂಬಂಧೀ ಚರ್ಚೆಗಳು ಕೇವಲ ವಿವಾದಗಳ ಹುತ್ತವಾಗಿ ಮಾರ್ಪಟ್ಟು ಮಥನವಾಗಬೇಕಿದ್ದ ವಿಚಾರಗಳು ಮೂಲೆಗೆ ಸೇರಿದ್ದು ನಿಜಕ್ಕೂ ವಿಷಾದನೀಯ. ಅಷ್ಟಕ್ಕೂ ಮುಗ್ಧ ಮಕ್ಕಳ ಎಳೆಯ ಮನಸ್ಸುಗಳಲ್ಲಿ ಇಸಂಗಳ ವಿಷ ಬಿಜಕ್ಕಿಂತಲೂ ಹೆಚ್ಚಾಗಿ ಮೌಲ್ಯಗಳ ಬಿತ್ತರಿಸುವಿಕೆಗೆ ಹೆಚ್ಚಿನ ಒತ್ತು ಸಿಗದೆ ಹೋಯಿತು. ಆದರೆ ಪಠ್ಯಗಳು ಮಕ್ಕಳ ಮನಸ್ಸಿನ ಮೇಲೆ ಬೀರುವ ಪರಿಣಾಮಗಳ ದೃಷ್ಟಿಯಿಂದ ಶಿಕ್ಷಣ ವಲಯ ಈ ಬಗ್ಗೆ ಗಂಭೀರವಾದ ಚರ್ಚೆಗಳನ್ನು ನಡೆಸದೆ ಹೋಯಿತು.

ಪಠ್ಯಪುಸ್ತಕಗಳು ಶಿಕ್ಷಣದ ದೀವಿಗೆಗಳಾಗಿ ರೂಪುಗೊಳ್ಳಲಿ, ಅದರಲ್ಲಿನ ವಿಚಾರಗಳು ಮಕ್ಕಳ ಬಾಳನ್ನು ರೂಪಿಸುವ ನಿಟ್ಟಿನಲ್ಲಿ ಹೊಸ ಹೊಳಹು ನೀಡಲಿ. ಪಠ್ಯಪುಸ್ತಕಗಳು ಯಾರೇ ರೂಪಿಸಿದರೂ ಸರಿಯೇ, ಆದರೆ ಅದೊರಳಗಿನ ಸತ್ವಗಳು ಮಕ್ಕಳ ಬಾಳಿಗೆ ಬೆಳಕಾಗಿ ಮುನ್ನಡೆಸಲಿ ಎಂಬುದು ನಮ್ಮ ಆಶಯ.

## 'ಎಲ್ಲರನ್ನು ಜೋಡಿಸುವುದೇ ಸಂಘಕಾರ್ಯ' – ಡಾ. ಮೋಹನ್ ಭಾಗವತ್

"ಸತ್ಯ, ಕರುಣಾ, ಶುಚಿತ್ವ ಮತ್ತು ತಪಸ್ಸು ಈ ಧರ್ಮದ ನಾಲ್ಕು ಆಧಾರ ಸ್ಥಂಭಗಳ ಆಧಾರದ ಮೇಲೆ ಭಾರತ ನಿಂತಿದೆ. ಅದೇ ನಮ್ಮ ರಾಷ್ಟ್ರೀಯ ಜೀವನವಾಗಿದೆ." ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಮೋಹನ್ ಭಾಗವತ್ ಅವರು ನಾಗಪುರದಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ತೃತೀಯ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಸರಸಂಘಚಾಲಕರು ಮಾತನಾಡುತ್ತಾ "'ಭಾರತ ಮಾತಾ ಕಿ ಜೈ' ಘೋಷ ಇಡೀ ವಿಶ್ವದಲ್ಲಿ ಮೊಳಗಬೇಕಿದೆ. ಯಾಕೆಂದರೆ, ನಾವು ವಿಶ್ವವಿಜೇತರಾಗಬೇಕಿಲ್ಲ, ನಾವು ಯಾರನ್ನು ಗೆಲ್ಲಬೇಕಿಲ್ಲ ಬದಲಾಗಿ ನಾವು ಎಲ್ಲರನ್ನು ಜೋಡಿಸಬೇಕಿದೆ. ಇದೇ ಸಂಘ ಕಾರ್ಯ, ಅಂದರೆ ಜೋಡಿಸುವ ಕೆಲಸ. ಸ್ವತಂತ್ರದ ಅಮೃತ ಮಹೋತ್ಸವ ನಡೆಯುತ್ತಿದೆ ಅದರಲ್ಲಿ 'ಸ್ವ' ಯಾವುದು? ಈ ಜೋಡಿಸುವ ಕೆಲಸವೆ ನಮ್ಮ ಸ್ವ." ಎಂದರು.

"ನಮ್ಮ ಪೂರ್ವಜರು ಪೂರ್ಣತೆಯ ಸತ್ಯವನ್ನು ಆವಿಷ್ಕಾರ ಮಾಡಿದವರು. ಅದು ನಮ್ಮೆಲ್ಲರಲ್ಲೂ ಏಕ ಮುಖವಾಗಿ ಪ್ರಕಟಗೊಳ್ಳುತ್ತದೆ ಎಂದು ಅರಿತವರು. ವಿವಿಧತೆ ಈ ಏಕತ್ವದ ಮತ್ತೊಂದು ಆಯಾಮ. ಅದು ಪ್ರತ್ಯೇಕತೆಯಲ್ಲ. ಪರಸ್ಪರ ನಮ್ಮಲ್ಲಿ ಸಂಬಂಧದ ಭಾವ, ಆತ್ಮೀಯತೆಯ ಭಾವವಿದೆ.ಈ ಭಾವನೆಯ ಮೂಲಕವೇ ಇಡೀ ವಿಶ್ವವನ್ನು ಸತ್ಯದ ಕಡೆಗೆ ಕರೆದೊಯ್ಯುಬೇಕಿದೆ. ಸತ್ಯ, ಕರುಣಾ, ಶುಚಿತ್ವ ಮತ್ತು ತಪಸ್ಸು ಈ ಧರ್ಮದ ನಾಲ್ಕು ಆಧಾರ ಸ್ಥಂಬಗಳ ಆಧಾರದ ಮೇಲೆ ಭಾರತ ನಿಂತಿದೆ. ಅದೇ ನಮ್ಮ ರಾಷ್ಟ್ರೀಯ ಜೀವನವಾಗಿದೆ."

ಸರಸಂಘಚಾಲಕರು ಮಾತನಾಡುತ್ತಾ "ಸಮನ್ವಯವನ್ನು ಕಲಿಸುವುದೇ ಧರ್ಮ, ಸಂತುಲನವನ್ನು ಕಲಿಸುವುದೇ ಧರ್ಮ, ಎಲ್ಲರನ್ನು ಒಳಗೊಂಡು ಎಲ್ಲರ ಉನ್ನತಿಯನ್ನು ಬಯಸುತ್ತದೆ.


*4ನೇ ಪುಟಕ್ಕೆ...*

## ಸಂಸ್ಮರಣೆ — ನಿಜಗುಣ ಶಿವಯೋಗಿಗಳು



ನಿಜಗುಣ ಶಿವಯೋಗಿಗಳು ಕ್ರಿ. ಶ. ಸುಮಾರು 1500ರ ಕಾಲದ ಕವಿ. ಇವರು ಶಿವಯೋಗಿ, ದಾರ್ಶನಿಕ ಹಾಗೂ ಹಾಡುಗಬ್ಬಕಾರ.

ಈತನ ಸ್ಥಳ ಕೊಳ್ಳೇಗಾಲದ ಪಕ್ಕದಲ್ಲಿರುವ 'ಚಿಲಕವಾಡಿ' ಗ್ರಾಮ. ಈ ಗ್ರಾಮದ ಪಕ್ಕದಲ್ಲಿರುವ ಶಂಭುಲಿಂಗನ ಬೆಟ್ಟದಲ್ಲಿ ಈತ ಕೆಲಕಾಲ ತಪಸ್ಸು ಮಾಡಿದಂತೆ ತಿಳಿದುಬರುತ್ತದೆ. ಶಂಭುಲಿಂಗನ ಬೆಟ್ಟದಲ್ಲಿ ಈತ ತಪಸ್ಸು ಮಾಡಿದ ಗವಿಯನ್ನು ಈಗಲೂ ಕಾಣಬಹುದು. ಕೊಳ್ಳೇಗಾಲದಿಂದ ಸುಮಾರು 10 ಕಿಮೀ ದೂರದಲ್ಲಿ ಚಾಮರಾಜನಗರಕ್ಕೆ ಹೋಗುವ ದಾರಿಯಲ್ಲಿ ಶಂಭುಲಿಂಗನ ಬೆಟ್ಟ ಮತ್ತು ದೇವಾಲಯಗಳಿವೆ. ಇಲ್ಲಿನ ಶಂಭುಲಿಂಗ ಸ್ವಯಂಭು ಎನ್ನಲಾಗಿದೆ. ಈತನೇ ಶಿವಯೋಗಿಗಳ ಅಂತಃಶಂಭುಲಿಂಗ.

ಹುಟ್ಟಿನಿಂದಲೇ ನಿಜಗುಣರು ಕವಿಹೃದಯವುಳ್ಳವರಾಗಿದ್ದರು. ಯೋಗಸಾಧನೆ ಮಾಡುತ್ತಿದ್ದಾಗಲೇ ಅವರು ತಮ್ಮ ಅನುಭವಗಳನ್ನು ಕವಿತೆಗಳ ರೂಪದಲ್ಲಿ ಹಾಡಿಕೊಳ್ಳುತ್ತಿದ್ದರು. ಅವರಿಗೆ ಸಂಗೀತದಲ್ಲಿಯೂ ಹೆಚ್ಚಿನ ಪಾಂಡಿತ್ಯವಿತ್ತು. ಆಧ್ಯಾತ್ಮದಂತಹ ಕಠಿಣ ವಿಷಯದ ಬಗ್ಗೆ ಸರಳವಾದ, ಸುಂದರವಾದ, ಕನ್ನಡದಲ್ಲಿ ಕವನಗಳನ್ನು ರಚಿಸಿದರು. ಅವುಗಳಿಗೆ ಶಾಸ್ತ್ರೀಯ ಕರ್ನಾಟಕ ಸಂಗೀತಕ್ಕೆ ಹೊಂದುವಂತೆ ರಾಗ, ತಾಳಗಳನ್ನು ಹಾಕಿದರು. ಎಲ್ಲರಿಗೂ ತಿಳಿಯುವಂತೆ ಸರಳ ಕನ್ನಡದಲ್ಲಿ ರಾಗಬದ್ಧವಾಗಿ ಬರೆದಿದ್ದರಿಂದ ಅವರ ಕವಿತೆಗಳು ಬಹು ಜನಪ್ರಿಯವಾದವು.

"ಕೈವಲ್ಯ" ಎಂದರೆ ಮುಕ್ತಿ, "ಪದ್ಧತಿ" ಎಂದರೆ ಮಾರ್ಗ ಎಂದು ಅರ್ಥವಾಗುತ್ತದೆ. ಕೈವಲ್ಯ ಪದ್ಧತಿ ಪುಸ್ತಕದಲ್ಲಿ ಶಿವಯೋಗಿಗಳು ಮುಕ್ತಿಯನ್ನು ಪಡೆಯುವ ಮಾರ್ಗವನ್ನು ತೋರಿಸಿದ್ದಾರೆ. ಪರಮೇಶ್ವರನ, ಗುರುವಿನ ಸ್ತುತಿಯಿಂದ ಈ ಗ್ರಂಥ ಪ್ರಾರಂಭವಾಗುತ್ತದೆ. 'ಶ್ರೀಗುರು ವಚನುಪದೇಶವನಾಲಿಸಿ ದಾಗಳಹುದು ನರರಿಗೆ ಮುಕುತಿ'. ತಾಯಿ ಮಗುವನ್ನು ಮರಿ, ಪಾಪು, ಬಾಳಾ, ತಮ್ಮಾ ಎಂದು ಮೊದಲಾಗಿ ಬೇರೆ ಬೇರೆ ಹೆಸರಿನಿಂದ ಕರೆದು ಸಂತೋಷಪಡುತ್ತಾಳೆ. ಅದರಂತೆ ಇಲ್ಲಿ ನಿಜಗುಣರು ಶಿವಾ, ಮಹಾದೇವ, ಶಂಕರ, ಪಾರ್ವತೀಧವ, ನೀಲಕಂಠ, ನಾಗಭೂಷಣ, ಚಂದ್ರಮವಳಿ, ಫಾಲಾಕ್ಷ, ಪಶುಪತಿ ಎನ್ನುವ 108 ನಾಮಾವಳಿಗಳಿಂದ ಪರಮೇಶ್ವರನನ್ನು ಸ್ತುತಿಸಿದ್ದಾರೆ. "ಉದಯ ಅಸ್ತಮಾನದೊಳು ನೂರೆಂಟು ನಾಮವನ್ನು ಪದುಳದಿಂದ ಓದಿ ಕೇಳಿದವರ್ಗೆ ಶಂಭುಲಿಂಗದ ಕರುಣದಿಂದ ಇತಿತು ಕೊರತೆಯಿಲ್ಲದೆ ಸಕಲ ಸಂಪದಗಳು ಒಂದುಗೂಡಿ ಸದಮಲ ಜ್ಞಾನ ಸದ್ಭಕ್ತಿಗಳು ಮೇಲೊದಗಿ ಕೈಸಾರುತಿಹವು ಇಹದಲ್ಲಿ ಪರದೊಳೊಂದಿದ ಗಣಪದವನ್ನೈದಿ ನಿಜಸುಖದೊಳಿಹ ಮುಕ್ತಿ ದೊರೆತುದಿದು ಸತ್ಯ." ಎಂದು ಈ ಸ್ತೋತ್ರ ಮುಕ್ತಾಯವಾಗುತ್ತದೆ.

ಅಂದರೆ ಈ ರೀತಿಯಾಗಿ ದಿನವೂ ಬೆಳಗ್ಗೆ, ಸಂಜೆ ಈಶ್ವರನನ್ನು ಸ್ಮರಿಸಬೇಕು. ಅವರಿಗೆ ಸಕಲ ಸಂಪತ್ತುಗಳು ಸಿಕ್ಕುತ್ತವೆ. ಜ್ಞಾನ, ಭಕ್ತಿಗಳು ದೊರೆತು ಮುಕ್ತಿಯು ದೊರೆಯುತ್ತದೆ ಎಂದು ಹೇಳಿದ್ದಾರೆ. ಅದರಂತೆ ಹ್ರೀಂಕಾರಿ, ವಾಣಿ, ಕಲ್ಯಾಣಿ, ರುದ್ರಾಣಿ, ರಮೆ, ವಿಮಲೆ, ಗಿರಿಜೆ, ಸುಮತಿ, ಸುಲಲಿತೆ, ಮಹೇಶ್ವರಿ, ಮಧುಮಾತೆ ಎನ್ನುವ ಸುಂದರ ಹೆಸರುಗಳಿಂದ ಪಾರ್ವತಿಯನ್ನು ಹಾಡಿ ಹೊಗಳಿದ್ದಾರೆ. ಶಿವ ಮತ್ತು ಪಾರ್ವತಿಯರ ಈ ನೂರೆಂಟು ನಾಮಾವಳಿಗಳನ್ನು ದಿನವೂ ಬೆಳಿಗ್ಗೆ, ಸಂಜೆ ಪೂಜಾ ಸಮಯದಲ್ಲಿ ಹೇಳುವ ರೂಢಿಯನ್ನು ವೀರಶೈವರು ಈಗಲೂ ಇಟ್ಟುಕೊಂಡಿದ್ದಾರೆ.

ನಿಜಗುಣ ಶಿವಯೋಗಿ ಕನ್ನಡದಲ್ಲಿ ವಿವೇಕಚಿಂತಾಮಣಿ, ಕೈವಲ್ಯಪದ್ಧತಿ, ಪುರಾತನರ ತ್ರಿವಿಧಿ, ಅನುಭವಸಾರ, ಪರಮಾರ್ಥಪ್ರಕಾಶಿಕೆ, ಪರಮಾನುಭವಬೋಧ, ಪರಮಾರ್ಥಗೀತೆ ಎಂಬ ಏಳು ಗ್ರಂಥಗಳನ್ನು ಬರೆದಿದ್ದಾನೆ. ಸಂಸ್ಕೃತದಲ್ಲಿ ಆತ್ಮತರ್ಕಚಿಂತಾಮಣಿ ಮತ್ತು ದರ್ಶನಸಾರ ಎಂಬ ಗ್ರಂಥಗಳನ್ನು ಬರೆದನೆಂದು ನಂಬಲಾಗಿದೆ. ಆದರೆ ಅವು ಉಪಲಬ್ಧವಿಲ್ಲ.

ನಿಜಗುಣ ಶಿವಯೋಗಿಯ ಗ್ರಂಥಗಳನ್ನು ಷಟ್ಶಾಸ್ತ್ರ ಎಂದೂ ಕರೆಯುವ ವಾಡಿಕೆ ಇದೆ. ಈತನ ಅನಂತರ ಕೃತಿ ರಚನೆ ಮಾಡಿದ ಮಹಲಿಂಗ ರಂಗ (ಅನುಭವಾಮೃತ), ಶಾಲ್ಯದ ಅರಸ (ಅನುಭವರಸಾಯನ), ಸರ್ಪಭೂಷಣ ಶಿವಯೋಗಿ (ಕೈವಲ್ಯಕಲ್ಪವಲ್ಲರಿ ಮತ್ತು ಜ್ಞಾನಶತಕ), ವೇದಾಂತ ಶಿವರಾಮಶಾಸ್ತ್ರಿ (ಬ್ರಹ್ಮಾನಂದಬೋಧೆ ಮತ್ತು ವೇದಾಂತ ತತ್ತ್ವಗಳು) ಮೊದಲಾದವರೆಲ್ಲರೂ ಈತನ ಪ್ರಭಾವಕ್ಕೊಳಗಾಗಿದ್ದಾರೆ.

ಒಂಬತ್ತನೆಯ ಶತಮಾನದಲ್ಲಿ ತಮಿಳುನಾಡಿನಲ್ಲಿ ಅರುವತ್ತೂರು ಜನ ಭಕ್ತವರೇಣ್ಯರು ಬಾಳಿ ಬೆಳಗಿದರು. ಇವರು ಭಿನ್ನ ಭಿನ್ನ ಜಾತಿಯವರಾಗಿದ್ದು ಕುಲದ ಕಟ್ಟು ನಿಟ್ಟು ಇಲ್ಲದವರಾಗಿದ್ದರು ತಮ್ಮ ಅಗಾಧ ಭಕ್ತಿಯಿಂದ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದರು. ದಕ್ಷಿಣ ಭಾರತದಲ್ಲಿ ಈ ಮಹಾಪುರುಷರು ತುಂಬ ಪ್ರಸಿದ್ಧರಾಗಿದ್ದಾರೆ. ಕವಿಗಳು ಸಂಸ್ಕೃತ, ತಮಿಳು, ಕನ್ನಡ ಭಾಷೆಗಳಲ್ಲಿ ಈ ಪುರಾತನರ ಚರಿತ್ರೆಗಳನ್ನು ಬರೆದಿದ್ದಾರೆ. ಈ ಅರವತ್ತೂರು ಪುರಾತನರಲ್ಲಿ ಪ್ರತಿಯೊಬ್ಬರ ಮೇಲೆ ಮೂರು ಸಾಲಿನ ಒಂದೊಂದು ಪದ್ಯವನ್ನು ನಿಜಗುಣರು ತಮ್ಮ "ಅರವತ್ತೂರು ಪುರಾತನರ ತ್ರಿವಿಧಿ" ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ಆ ಮೂರು ಸಾಲಿನ ಪದ್ಯ ಅಂದರೆ ತ್ರಿಪದಿಯಲ್ಲಿ ಒಟ್ಟು ಅವರ ಸಮಗ್ರ ಪರಿಚಯವನ್ನೇ ಮಾಡಿಕೊಟ್ಟಿದ್ದಾರೆ. ಅವರಲ್ಲಿ ಬೇಡರ ಕಣ್ಣಪ್ಪನನ್ನು ಕುರಿತು ಬರೆದ ಈ ಪದ್ಯವನ್ನು ಕಟ್ಟಿದ್ದಾರೆ:

'ಮೃಡನ ದೃಷ್ಟಿಯಲ್ಲಿ ರುಜೆಯಡರಿತೆಂದತಿ ಭೀತಿ ವಿಡಿದು ನಿಜಲೋಚನವಿತ್ತ ಕನ್ನಪ್ಪ ನಡಿಗಳಂ ಪೊತ್ತು ಬಿಡದಿರ್ಪೆ'

ಇಲ್ಲಿ ಮೃಡ ಎಂದರೆ ಶಿವ, ರುಜೆ ಎಂದರೆ ರೋಗ, ನಿಜಲೋಚನ ಎಂದರೆ ತನ್ನ ಕಣ್ಣುಗಳು ಎನ್ನುವುದು ಅರ್ಥವಾದರೆ ಸಾಕು. ಅಂತ ಕನ್ನಪ್ಪನ (ಕಣ್ಣಪ್ಪ) ಅಡಿಗಳನ್ನು ಹಿಡಿದು ನಿಜಗುಣರು ಕೊಂಡಾಡಿದ್ದಾರೆ.

ವಿವೇಕಚಿಂತಾಮಣಿ ಎಂಬುದು ನಿಜಗುಣ ಶಿವಯೋಗಿ ಬರೆದಿರುವ ಗ್ರಂಥಗಳಲ್ಲಿ ಅತ್ಯಂತ ಮಹತ್ವದ್ದು. ಇದು ಕನ್ನಡದ ಮೊಟ್ಟಮೊದಲನೆಯ ವಿಶ್ವಕೋಶ ಎನಿಸಿದೆ. ಒಬ್ಬ ಸಂನ್ಯಾಸಿ ಬೆಟ್ಟದ ಗವಿಯೊಂದರಲ್ಲಿ ಕುಳಿತುಕೊಂಡು ಇಂಥ ವಿಶ್ವಕೋಶವನ್ನು ಹೇಗೆ ರಚಿಸಿದನೆಂಬುದು ಸೋಜಿಗದ ಸಂಗತಿ. ಈ ಗ್ರಂಥವನ್ನು 16ನೆಯ ಶತಮಾನದಲ್ಲಿ ಶಾಂತಲಿಂಗ ಶಿವಯೋಗಿ ಎಂಬಾತ ಮರಾಠಿಗೂ, 17ನೆಯ ಶತಮಾನದಲ್ಲಿ ಮಹಾಕವಿ ಶಿವಪ್ರಕಾಶಸ್ವಾಮಿ ತಮಿಳಿಗೂ, 18ನೆಯ ಶತಮಾನದಲ್ಲಿ ಲಿಂಗರಾಜ ಸಂಸ್ಕೃತಕ್ಕೂ ಭಾಷಾಂತರಿಸಿದ್ದಾರೆ. 18ನೆಯ ಶತಮಾನದಲ್ಲಿ ಸಂಸ್ಕೃತದಲ್ಲಿ ಶಿವತತ್ತ್ವ ರತ್ನಾಕರವೆಂಬ ವಿಶ್ವಕೋಶವನ್ನು ಬರೆದ ಕೆಳದಿಯ ಬಸವರಾಜ ವಿವೇಕಚಿಂತಾಮಣಿ ಗ್ರಂಥದಿಂದ ಉಪಕೃತನಾಗಿದ್ದನೆಂದು ತಿಳಿದುಬರುತ್ತದೆ. ಈ ಗ್ರಂಥ ಗದ್ಯದಲ್ಲಿದ್ದು ಹತ್ತು ವಿಭಾಗಗಳಿಂದ ಕೂಡಿದೆ. ಒಟ್ಟು 592 ವಿಷಯಗಳು ನಿರೂಪಿತವಾಗಿವೆ. ಸಂಗೀತ ಶಾಸ್ತ್ರವನ್ನು ಕುರಿತ ಸಂಪೂರ್ಣ ವಿವರಣೆಯಿದೆ.

ಪರಮಾರ್ಥಪ್ರಕಾಶಿಕೆ ಎಂಬುದು ಸಂಸ್ಕೃತದಲ್ಲಿದೆ. ಇದು ಚನ್ನಸದಾಶಿವಯೋಗಿ ಬರೆದಿರುವ ಶಿವಯೋಗಪ್ರದೀಪಿಕೆ ಎಂಬ ಗ್ರಂಥದ ಅನುವಾದ. ಐದು ಪರಿಚ್ಛೇದಗಳಿಂದ ಕೂಡಿ ಹಠಯೋಗ, ರಾಜಯೋಗ, ಮಂತ್ರಯೋಗ, ಲಯಯೋಗ ಎಂದು ಪತಂಜಲಿ ಹೇಳುವ ನಾಲ್ಕು ಯೋಗಗಳಿಗಿಂತ ಶಿವಯೋಗ ಅಧಿಕವಾದುದೆಂದು ಈ ಗ್ರಂಥದಲ್ಲಿ ಹೇಳಿದೆ. ಇದು ತೆಲುಗಿನಲ್ಲಿ ಶಿವಯೋಗ ಸಾರಮು ಎಂದು ಭಾಷಾಂತರವಾಗಿದೆ.

ಅನುಭವಸಾರವೆಂಬುದು ತ್ರಿಪದಿ ರೂಪದಲ್ಲಿರುವ ಒಂದು ವೇದಾಂತ ಗ್ರಂಥ. 8 ಸಂಧಿಗಳು 35 ತ್ರಿಪದಿಗಳೂ ಇವೆ. ಪರಮಾನುಭವಬೋಧೆ ಎಂಬುದು ಸಾಂಗತ್ಯದಲ್ಲಿರುವ ಒಂದು ವೇದಾಂತ ಗ್ರಂಥ; ಇದು 6 ಸಂಧಿ, 975 ಸಾಂಗತ್ಯಗಳಿಂದ ಕೂಡಿದೆ. ಇದರಲ್ಲಿ ಪರತತ್ತ್ವಬೋಧೆಯನ್ನು ಯೋಗಿಜನರು ಒಪ್ಪುವಂತೆ ನಿರೂಪಿಸಲಾಗಿದೆ. ಪರಮಾರ್ಥಗೀತೆ ಎಂಬುದು ಸಂಸ್ಕೃತ ಪ್ರಸಿದ್ಧವಾಗಿರುವ ಯೋಗವಾಸಿಷ್ಠದ ಕನ್ನಡ ಅನುವಾದ; ಮಂದಾನಿಲ ರಗಳೆಯಲ್ಲಿ ಗುರುಶಿಷ್ಯರ ಪ್ರಶ್ನೋತ್ತರ ರೂಪದಲ್ಲಿದೆ. ಪ್ರಾರಂಭದಲ್ಲಿ ಕೆಲವು ಕಂದಪದ್ಯಗಳಿವೆ. ಹನ್ನೊಂದು ಗತಿಗಳಾಗಿ ವಿಂಗಡನೆಗೊಂಡಿರುವ ಈ ಗ್ರಂಥದಲ್ಲಿ 1,469 ಚರಣಗಳಿವೆ.

ಕನ್ನಡ ಭಾಷೆಯ ಭಕ್ತಿ ಸಾಹಿತ್ಯದಲ್ಲಿ ನಿಜಗುಣ ಶಿವಯೋಗಿಗಳ ಸ್ಥಾನ ಯಾವತ್ತೂ ಅನುಭಾವಿಗಳ ಸ್ತರದಲ್ಲೇ ಗಣಿತವಾಗಿದೆ.

## ಎಲ್ಲೋ ಕೇಳಿದ ಕಥೆ



**ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲೋ ಕೇಳಿದ ಕಥೆಯಲ್ಲಿ ಪ್ರಮಾದವಶಾತ್ ಕೆಲವು ತಪ್ಪು ಮಾಹಿತಿಗಳು ನುಸುಳಿದ್ದವು. ಈ ಬಾರಿ ಅದನ್ನು ಸರಿಪಡಿಸಿ ಇಲ್ಲಿ ಕೊಡಲಾಗಿದೆ.**

ಭರತ ಬಾಹುಬಲಿಗಳಿಬ್ಬರೂ ಅತ್ಯಂತ ಶೂರರು. ಧರ್ಮಿಷ್ಠರು. ಒಮ್ಮೆ ಭರತನ ಪುಣ್ಯ ಪರಿಪಾಕದಿಂದ ಆಯುಧಶಾಲೆಯಲ್ಲಿ ಸಹಸ್ರ ಯಕ್ಷ ರಕ್ಷಿತವು ದಿವ್ಯವೂ ಆದ ಚಕ್ರರತ್ನವು ಉದ್ಭವಿಸಿತು.

ಅದೇ ಸಮಯಕ್ಕೆ ತಂದೆ ಶ್ರೀ ವೃಷಭಸ್ವಾಮಿಗೆ ಕೇವಲಜ್ಞಾನ ಪ್ರಾಪ್ತಿಯಾದ ವಿಚಾರ ತಿಳಿದು ಅಲ್ಲಿಗೆ ಹೋಗಿ ಆಶೀರ್ವಾದ ಪಡೆದು ಬಂದು, ಪುತ್ರನ ಜನನದ ವಿಚಾರ ತಿಳಿದು ಅಂತಃಪುರಕ್ಕೂ ಹೋಗಿ ಬಂದ ನಂತರದಲ್ಲಿ ಚಕರತ್ನದ ಬಲದಿಂದ ದಿಗ್ವಿಜಯ ಯಾತ್ರೆಯನ್ನು ಕೈಗೊಂಡನು.

ಚಕ್ರರತ್ನದ ನಿಮಿತ್ತ ಚಕ್ರವರ್ತಿಯಾದ ಭರತನು ಷಟ್ಖಂಡ ಮಂಡಿತವಾದ ಭರತಕ್ಷೇತ್ರವನ್ನೆಲ್ಲ ಜಯಿಸಿ ಅಯೋಧ್ಯೆಗೆ ಹಿಂತಿರುಗುವಾಗ ಚಕ್ರರತ್ನವು ಪುರ ಪ್ರವೇಶ ಮಾಡದೆ ನಿಂತಿತು. ತನಗೆ ಕಪ್ಪ ಕಾಣಿಕೆಗಳನ್ನು ನೀಡದೆ, ಯುದ್ಧ ಮಾಡದೆ ಇರುವ ಸಾಮ್ರಾಜ್ಯವು ಇರುವುದರಿಂದಲೇ ಹೀಗಾಗಿದೆ ಎಂದು ಅರಿತುಕೊಂಡನು.


ವಿಚಾರಿಸಿದಾಗ ತನ್ನ ತಮ್ಮಂದಿರನ್ನು ಸೋಲಿಸದೆ ಮರೆತಿರುವ ವಿಚಾರ ಬೆಳಕಿಗೆ ಬಂದಿತು. ಭರತನು ಅವರಿಗೆ ಸಂದೇಶ ಕಳುಹಿಸಿದನು. ಸ್ವಾಭಿಮಾನಿಗಳಾದ ಆ ಸಹೋದರರು ಭರತನ ಸಂದೇಶಕ್ಕೆ ಅಧೀನರಾಗಲು ಒಪ್ಪದೆ ತಮ್ಮ ತಂದೆಯಲ್ಲಿಗೆ ಕೈಲಾಸಪರ್ವತಕ್ಕೆ ತೆರಳಿ ತಮ್ಮ ತಂದೆ ವೃಷಭಸ್ವಾಮಿಗೆರಗಿ ಭರತನು ಹೇಳಿಕಳುಹಿಸಿದ ವಿಷಯವನ್ನು ವಿಜ್ಞಾಪಿಸಿ "ಸ್ವಾಮಿಯೇ! ನಿಮ್ಮ ಚರಣಕಮಲಧೂಳಿಯಿಂದ ಪವಿತ್ರವಾದ ನಮ್ಮ ಈ ಕಿರೀಟವು ಪರರಿಗೆಂದೂ ಬಾಗದು. ಆ ಭರತನೇ ಬಂದು ನಮಗೆರಗುವಂತಹ ದೀಕ್ಷೆಯನ್ನೀಗಲೇ ನಮಗೆ ದಯಪಾಲಿಸು" ಎಂದು ಬೇಡಿಕೊಂಡು ಸ್ವಾಮಿಯಿಂದ ದೀಕ್ಷೆಯನ್ನು ಪಡೆದರು.

ಈ ಸುದ್ದಿಯನ್ನು ಕೇಳಿ ಭರತನು ಮನ ಮರುಗಿದನಾದರೂ ಬಾಹುಬಲಿ ಕುಮಾರನನ್ನು ಸಾಮೋಪಾಯದಿಂದ ತನ್ನ ಬಳಿಗೆ ಕರೆದುಕೊಂಡು ಬರುವಂತೆ ಮಂತ್ರಿ ದಕ್ಷಿಣಾಂಕನನ್ನು ಅವನ ಬಳಿಗೆ ಕಳುಹಿಸಿದನು.

ಬಾಹುಬಲಿ ಸ್ವಾಮಿಯ ಬಳಿ ಬಂದ ಮಂತ್ರಿ ದಕ್ಷಿಣಾಂಕನ ಸಂದೇಶವನ್ನು ತಿಳಿದ ಬಾಹುಬಲಿಯು ತಾನು ಶರಣಾಗದೆ ಯುದ್ಧ ಮಾಡುವುದಾಗಿ ಘೋಷಿಸುತ್ತಾನೆ. ರಣರಂಗದಲ್ಲಿ ಭೇಟಿಯಾದ ಭರತ ಬಾಹುಬಲಿಯರಿಬ್ಬರು ದೃಷ್ಟಿ ಯುದ್ಧ, ಜಲಯುದ್ಧ, ಮಲ್ಲಯುದ್ಧಗಳಲ್ಲಿ ಬಾಹುಬಲಿ ಸ್ವಾಮಿಯೇ ಮೇಲುಗೈ ಸಾಧಿಸತೊಡಗಿದನು. ಕೊನೆಗೆ ಭರತನು ಬಾಹುಬಲಿಯ ಮೇಲೆ ಸುದರ್ಶನ ಚಕ್ರವನ್ನು ಪ್ರಯೋಗಿಸಿದನು. ಆದರೆ ಆ ಚಕ್ರವು ಮಹಾ ತೇಜಸ್ವಿಯಾದ ಬಾಹುಬಲಿ ಸ್ವಾಮಿಯ ಹತ್ತಿರ ಹೋಗಿ ಸ್ತಬ್ಧವಾಗಿ ನಿಂತುಕೊಂಡಿತು. ಆಗ ಬಾಹುಬಲಿ ಕುಮಾರನು ಭರತನನ್ನು ನೆಲಕ್ಕಪ್ಪಳಿಸಿದಾಗ, ದೇವತೆಗಳು ಪುಷ್ಪವೃಷ್ಟಿಗರೆದರು.

ಭರತಕುಮಾರನನ್ನು, ಇಡಿಯ ಭೂಮಂಡಲವನ್ನೂ ಗೆದ್ದ ಬಾಹುಬಲಿ ಸ್ವಾಮಿಗೆ ಏನೂ ಬೇಡವಾಗಿ ವೈರಾಗ್ಯ ಉದಯಿಸಿತು. ಸ್ವತಃ ತನ್ನ ಅಣ್ಣನ ಮೇಲೆ ಯುದ್ಧಕ್ಕೆಳೆಸಿದ ತನ್ನ ಮೇಲೆ ಜಿಗುಪ್ಸೆಯಾಗಿ ಕೈವಲ್ಯ ಜ್ಞಾನದ ಪ್ರಾಪ್ತಿಗೆ ಬಾಹುಬಲಿ ಸ್ವಾಮಿಯು ತೆರಳಿದನು. ಅವರ ತ್ಯಾಗ, ವೈರಾಗ್ಯದ ಮೂಲಕ ಅಮರನಾಗಿ ಇಂದಿಗೂ ಪೂಜಿಸಲ್ಪಡುತ್ತಿದ್ದಾರೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ




### ಎಥೆನಾಲ್ ಮಿಶ್ರಿತ ಪೆಟ್ರೋಲ್‌ನಿಂದ 40,600 ಕೋಟಿ ರೂ. ಗಳಿಸಿದ್ದಾರೆ ರೈತರು

ಕೇಂದ್ರ ಸರ್ಕಾರದ ಎಥೆನಾಲ್ ಮಿಶ್ರಿತ ಪೆಟ್ರೋಲ್ (EBP) ಕಾರ್ಯಕ್ರಮವು ಇಂಧನದ ಮೇಲಿನ ಆಮದು ಅವಲಂಬನೆಯನ್ನು ಕಡಿಮೆ ಮಾಡುವ ಮೂಲಕ ಭಾರತದ ಇಂಧನ ಭದ್ರತೆ ಹೆಚ್ಚಿಸುತ್ತಿರುವುದು ಮಾತ್ರವಲ್ಲದೇ, ರೈತರ ಆದಾಯ ಮತ್ತು ಕೃಷಿ ವಲಯಕ್ಕೆ ಉತ್ತೇಜನ ನೀಡುತ್ತಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಪ್ರಕಾರ, ಎಥೆನಾಲ್ ಮಿಶ್ರಣದಿಂದ ಕಳೆದ ಎಂಟು ವರ್ಷಗಳಲ್ಲಿ ರೈತರಿಗೆ 40,600 ಕೋಟಿ ರೂ. ಪಾವತಿಯಾಗಿದೆ. ಈ ಅವಧಿಯಲ್ಲಿ, EBP ರೂ. 41,500 ಕೋಟಿಗಳಷ್ಟು ವಿದೇಶೀ ವಿನಿಮಯದ ಪ್ರಭಾವವನ್ನು ಸೃಷ್ಟಿಸಿದೆ ಮತ್ತು 27 ಲಕ್ಷ ಮೆಟ್ರಿಕ್ ಟನ್ ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆಗೊಳಿಸಿದೆ.

2018ರಲ್ಲಿ ಸರ್ಕಾರವು ಸೂಚಿಸಿದ 'ಜೈವಿಕ ಇಂಧನಗಳ ರಾಷ್ಟ್ರೀಯ ನೀತಿ' 2030ರ ವೇಳೆಗೆ ಪೆಟ್ರೋಲ್‌ನಲ್ಲಿ ಶೇಕಡಾ 20 ರಷ್ಟು ಎಥೆನಾಲ್ ಮಿಶ್ರಣವನ್ನು ಗುರಿಯಾಗಿರಿಸಿಕೊಂಡಿದೆ. ಆದರೆ ಈ ಗುರಿಯನ್ನು 2030ರ ಬದಲು 2025–26ರಲ್ಲೇ ಸಾಧಿಸಲಾಗುತ್ತದೆ.

ಪ್ರಸ್ತುತ, ಭಾರತದಲ್ಲಿ ಎಥೆನಾಲ್ ಆರ್ಥಿಕತೆಯನ್ನು 20,000 ಕೋಟಿ ರೂ.ಗೆ ನಿಗದಿಪಡಿಸಲಾಗಿದೆ, ಇದು 2 ಲಕ್ಷ ಕೋಟಿಗೂ ಹೆಚ್ಚು ತಲುಪುವ ಗುರಿಯನ್ನು ಹೊಂದಿದೆ. 60 ವರ್ಷಗಳಿಂದ ತಮ್ಮ ಸಾರಿಗೆ ಉದ್ಯಮದಲ್ಲಿ ಎಥೆನಾಲ್ ಬಳಸುತ್ತಿರುವ ಬ್ರೆಜಿಲ್‌ನಂತಹ ದೇಶಗಳ ಹೆಜ್ಜೆಗಳನ್ನು ಭಾರತ ಅನುಸರಿಸಲು ಬಯಸಿದೆ ಮತ್ತು ಪೆಟ್ರೋಲ್‌ನಲ್ಲಿ ಶೇಕಡಾ 27ರಷ್ಟು ಎಥೆನಾಲ್‌ನ ಕಡ್ಡಾಯ ಮಿಶ್ರಣವನ್ನು ಹೊಂದಿದೆ.

### 22,850 ಅಡಿ ಎತ್ತರದಲ್ಲಿ ಯೋಗ: ಐಟಿಬಿಪಿ ಹಿಮ ವೀರರಿಂದ ದಾಖಲೆ

ಇಂಡೋ–ಟಿಬೆಟಿಯನ್ ಗಡಿ ಪೊಲೀಸ್ (ಐಟಿಬಿಪಿ) ಸಿಬ್ಬಂದಿ ಉತ್ತರಾಖಂಡದ ಅತಿ ಎತ್ತರದ ಹಿಮ ಶಿಖರ ಮೌಂಟ್ ಅಂಬಿ ಗಮಿನ್‌ನಲ್ಲಿ ಯೋಗಾಭ್ಯಾಸ ಮಾಡಿ ದಾಖಲೆ ನಿರ್ಮಿಸಿದ್ದಾರೆ. ಅಂತರಾಷ್ಟ್ರೀಯ ಯೋಗ ದಿನದ ಪೂರ್ವಭಾವಿಯಾಗಿ ಈ ಯೋಗಭ್ಯಾಸ ಪ್ರದರ್ಶನವನ್ನು ನೀಡಲಾಗಿದೆ.



ಈ ಬಗ್ಗೆ ಐಟಿಬಿಪಿ ಟ್ವೀಟ್ ಮಾಡಿದ್ದು, "ಅತೀ ಎತ್ತರದ ಶಿಖರದಲ್ಲಿ ಯೋಗಾಭ್ಯಾಸ ಮಾಡುವ ಮೂಲಕ ಐಟಿಬಿಪಿ ಹೊಸ ದಾಖಲೆ ನಿರ್ಮಿಸಿದೆ. ಐಟಿಬಿಪಿ ಹಿಮವೀರರು ಅಂತರಾಷ್ಟ್ರೀಯ ಯೋಗ ದಿನದ ಪೂರ್ವಭಾವಿಯಾಗಿ ಯೋಗ ಅಭ್ಯಾಸ ಮಾಡಿದ್ದಾರೆ. ಉತ್ತರಾಖಂಡದ ಮೌಂಟ್ ಅಬಿ ಗಮಿನ್ ಹತ್ತಿರದ ಹಿಮಾವೃತ ಸ್ಥಿತಿಯಲ್ಲಿ 22,850 ಅಡಿ ಎತ್ತರದಲ್ಲಿ 'ಮಾನವೀಯತೆಗಾಗಿ ಯೋಗ' ವಿಷಯದೊಂದಿಗೆ ಯೋಗಾಭ್ಯಾಸ ಮಾಡಲಾಗಿದೆ" ಎಂದಿದೆ.

### ಜಿಲ್ಲೆಗೊಂದು ರಫ್ತು ಉತ್ತೇಜಕ ಕೇಂದ್ರ ಸ್ಥಾಪನೆಗೆ ಮುಂದಾದ ರಾಜ್ಯ ಸರ್ಕಾರ

ಜಿಲ್ಲೆಗೊಂದು ರಫ್ತು ಉತ್ತೇಜಕ ಕೇಂದ್ರವನ್ನು ಸ್ಥಾಪನೆ ಮಾಡಲು ರಾಜ್ಯ ಸರ್ಕಾರ ನಿರ್ಧಾರ ಮಾಡಿದೆ. ರೈತರಿಗೆ ಸಾಂಸ್ಥಿಕ ಬಲ ತುಂಬಿ ಉತ್ಪಾದಕತೆ ಮತ್ತು ಮಾರುಕಟ್ಟೆ ಸಾಮರ್ಥ್ಯವನ್ನು ವೃದ್ಧಿಸುವ ಉದ್ದೇಶದಿಂದ ರಚನೆಯಾಗಿರುವ 1,084 ರೈತ ಉತ್ಪಾದಕ ಸಂಸ್ಥೆಗಳಿಗೆ ಪೂರಕವಾಗಿ ರಫ್ತು ಉತ್ತೇಜಕ ಕೇಂದ್ರಗಳನ್ನು ಸ್ಥಾಪನೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ.

ರೈತರ ಆದಾಯವನ್ನು ದ್ವಿಗುಣಗೊಳಿಸಲು ಕೇಂದ್ರ ಸರಕಾರ ನೀಡುವ ಶೇ.90ರಷ್ಟು ಸಹಾಯಧನವನ್ನು ಬಳಸಿಕೊಂಡು 'ಒಂದು ಜಿಲ್ಲೆ – ಒಂದು ಉತ್ಪನ್ನ' ಕಲ್ಪನೆಯಂತೆ ರೈತ ಉತ್ಪಾದಕ ಸಂಸ್ಥೆಗಳ ರಫ್ತು ಚಟುವಟಿಕೆಗಳಿಗೆ ನೆರವಾಗಲು ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

# ಸಾಲುದ್ದದ ಸುದ್ದಿಗಳು




ಈಗಾಗಲೇ ಮಹಾರಾಷ್ಟ್ರದಲ್ಲಿ ಇದು ಜಾರಿಗೊಂಡು ಅಭೂತಪೂರ್ವವಾಗಿ ಯಶಸ್ಸನ್ನು ಕಂಡಿದೆ. ಇದೇ ಮಾದರಿಯಲ್ಲಿ ರಾಜ್ಯದಲ್ಲೂ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಿದೆ. ದೇಶಿಯ ಮಾರುಕಟ್ಟೆ ಅವಲಂಬನೆಯನ್ನು ತಪ್ಪಿಸಿ ವಿದೇಶಿ ಮಾರುಕಟ್ಟೆಯ ಸ್ಪರ್ಧಾತ್ಮಕ ಅವಕಾಶಗಳನ್ನು ಬಳಸಿಕೊಳ್ಳಲು ರೈತ ಉತ್ಪಾದಕ ಸಂಸ್ಥೆಗಳಿಗೆ ನೆರವಾಗುವುದಕ್ಕೆ ಪ್ರತಿ ಜಿಲ್ಲೆಯಲ್ಲೂ ರಫ್ತು ಉತ್ತೇಜನ ಕೇಂದ್ರಗಳನ್ನು ತೆರೆಯಲಾಗುತ್ತಿದೆ ಎಂದು ಸರ್ಕಾರ ಹೇಳಿದೆ.

### ಕಳೆದ 8 ವರ್ಷದಲ್ಲಿ ಭಾರತದ ಅರಣ್ಯ ಪ್ರದೇಶ 20,000 ಚದರ ಕಿ.ಮೀ ಹೆಚ್ಚಾಗಿದೆ: ಮೋದಿ

ವಿಶ್ವ ಪರಿಸರ ದಿನ 2022ರ ಸಂದರ್ಭದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಇಂದು 'ಮಣ್ಣು ಉಳಿಸಿ ಆಂದೋಲನ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಳೆದ ಎಂಟು ವರ್ಷಗಳಲ್ಲಿ ಭಾರತದ ಅರಣ್ಯ ಪ್ರದೇಶವು 20,000 ಚದರ ಕಿ.ಮೀ.ಗಳಷ್ಟು ಹೆಚ್ಚಾಗಿದೆ ಎಂದು ಹೇಳಿದರು.



ಇಶಾ ಫೌಂಡೇಶನ್ ಸಂಸ್ಥಾಪಕ ಸದ್ಗುರು ಅವರೊಂದಿಗೆ ವೇದಿಕೆಯನ್ನು ಹಂಚಿಕೊಂಡ ಪ್ರಧಾನಿ ಮೋದಿ, ಇಂದು ಭಾರತವು ತನ್ನ ಗುರಿಗಿಂತ ಐದು ತಿಂಗಳು ಮುಂಚಿತವಾಗಿ ಪೆಟ್ರೋಲ್‌ನಲ್ಲಿ ಶೇಕಡಾ 10 ಎಥೆನಾಲ್ ಮಿಶ್ರಣವನ್ನು ಸಾಧಿಸಿದೆ ಎಂದು ಹೇಳಿದರು. ಹವಾಮಾನ ಬದಲಾವಣೆಯಲ್ಲಿ ಪಾತ್ರ "ನಗಣ್ಯ" ಆಗಿದ್ದರೂ ಸಹ ಪರಿಸರವನ್ನು ರಕ್ಷಿಸುವ ಭಾರತದ ಪ್ರಯತ್ನಗಳು ಬಹು ಆಯಾಮದವು ಎಂದು ಪ್ರಧಾನಿ ಮೋದಿ ಎತ್ತಿ ತೋರಿಸಿದರು.

ಹಿಂದೆ ನಮ್ಮ ರೈತರಿಗೆ ಮಣ್ಣಿನ ಆರೋಗ್ಯದ ಬಗ್ಗೆ ಅರಿವಿರಲಿಲ್ಲ. ಈ ಸಮಸ್ಯೆಯನ್ನು ಹೋಗಲಾಡಿಸಲು ದೇಶದ ರೈತರಿಗೆ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ನೀಡುವ ಬೃಹತ್ ಅಭಿಯಾನವನ್ನು ಪ್ರಾರಂಭಿಸಲಾಯಿತು. ಈ ವರ್ಷದ ಬಜೆಟ್‌ನಲ್ಲಿ ನಾವು ಗಂಗಾ ನದಿ ಕಾರಿಡಾರ್‌ನಲ್ಲಿ ನೈಸರ್ಗಿಕ ಕೃಷಿಯನ್ನು ಘೋಷಿಸಿದ್ದೇವೆ" ಎಂದಿದ್ದಾರೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅತಿ ಹೆಚ್ಚು ಇಂಗಾಲದ ಹೊರಸೂಸುವಿಕೆಗೆ ಕಾರಣವಾಗಿವೆ ಎಂದು ಹೇಳಿದ ಪ್ರಧಾನಿ ಮೋದಿ, ಭಾರತದ ಬಹುಮುಖಿ ಪ್ರಯತ್ನಗಳ ಭಾಗವಾಗಿ ಕೇಂದ್ರವು ಪ್ರಾರಂಭಿಸಿದ ವಿವಿಧ ಅಭಿಯಾನಗಳು ಪರಿಸರದ ಸಂರಕ್ಷಣೆಗೆ ಕೊಡುಗೆ ನೀಡುತ್ತಿವೆ ಎಂದು ಹೇಳಿದರು.

### 177 ಕಾಶ್ಮೀರಿ ಪಂಡಿತ ಶಿಕ್ಷಕರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದ ಸರ್ಕಾರ

ಕಾಶ್ಮೀರದಲ್ಲಿ ಉದ್ದೇಶಿತ ಹತ್ಯೆಗಳ ಆತಂಕಕಾರಿ ಹೆಚ್ಚಳದ ಹಿನ್ನೆಲೆಯಲ್ಲಿ ಶ್ರೀನಗರದಲ್ಲಿ ನಿಯೋಜಿಸಲಾದ 177 ಕಾಶ್ಮೀರಿ ಪಂಡಿತ್ ಶಿಕ್ಷಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಸರ್ಕಾರ ಆದೇಶಿಸಿದೆ.

ಕಾಶ್ಮೀರಿ ಪಂಡಿತ್ ಸಮುದಾಯ ಮತ್ತು ವಲಸೆ ಕಾರ್ಮಿಕರನ್ನು ಗುರಿಯಾಗಿಸಿಕೊಂಡು ದಾಳಿಗಳ ಸರಣಿಯ ಹಿನ್ನೆಲೆಯಲ್ಲಿ ಪ್ರಕ್ಷುಬ್ಧ ಕೇಂದ್ರಾಡಳಿತ ಪ್ರದೇಶದಲ್ಲಿ ಭದ್ರತಾ ಪರಿಸ್ಥಿತಿಯನ್ನು ಅವಲೋಕಿಸಲು ಗೃಹ ಸಚಿವ ಅಮಿತ್ ಶಾ ಅವರು ಉನ್ನತ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿದ ಒಂದು ದಿನದ ನಂತರ ಈ ಕ್ರಮವು ಬಂದಿದೆ.

ಕಳೆದ ಕೆಲವು ತಿಂಗಳಿನಿಂದ ಕಾಶ್ಮೀರದಲ್ಲಿ ಹಿಂದೂಗಳ ಸರಣಿ ಹತ್ಯೆಗಳು ನಡೆಯುತ್ತಿವೆ. ಹೀಗಾಗಿ ಸುರಕ್ಷತೆ ಬೇಕು ಎಂದು ಅಲ್ಲಿನ ಹಿಂದೂಗಳು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಕ್ರಮಕೈಗೊಂಡಿದೆ.

### ಮೇನಲ್ಲಿ ರೂ.10 ಟ್ರಿಲಿಯನ್ ಮೈಲಿಗಲ್ಲು ದಾಟಿದ UPI

UPI ಪಾವತಿ ವ್ಯವಸ್ಥೆಯು ಕಳೆದ ಎರಡು ವರ್ಷಗಳಲ್ಲಿ ಗಣನೀಯ ಬೆಳವಣಿಗೆಯೊಂದಿಗೆ ಪ್ರಮುಖ ಮೈಲಿಗಲ್ಲನ್ನು ಮುಟ್ಟಿದೆ. ಯುಪಿಐ ಪಾವತಿಯು 2021–22ರ ಹಣಕಾಸು ವರ್ಷದಲ್ಲಿ ಕೇವಲ ಎರಡು ತಿಂಗಳ ಹಿಂದೆ ವಹಿವಾಟಿನ ಮೌಲ್ಯಗಳಲ್ಲಿ $1 ಟ್ರಿಲಿಯನ್ ಮಾರ್ಕ್ ಅನ್ನು ತಲುಪಿತ್ತು, ಈಗ, ಡಿಜಿಟಲ್ ಪಾವತಿ ಕ್ಷೇತ್ರದಲ್ಲಿ ಮತ್ತೊಂದು ದಾಖಲೆಯ ಬೆಳವಣಿಗೆಗೆ ಭಾರತವು ಸಾಕ್ಷಿಯಾಗುತ್ತಿದ್ದು, UPI ರೂ. 10 ಟ್ರಿಲಿಯನ್ ಮೈಲಿಗಲ್ಲನ್ನು ದಾಟಿದೆ.

ಮೇ ಭಾರತದ ಪ್ರಮುಖ ಡಿಜಿಟಲ್ ಪಾವತಿ ವೇದಿಕೆಯಾದ ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್ (UPI)ನಲ್ಲಿ ಭಾರತದ ಯಶಸ್ಸಿನ ಮತ್ತೊಂದು ದಾಖಲೆಯ ತಿಂಗಳು, ಮೇ ತಿಂಗಳಲ್ಲಿ ರೂ.10 ಟ್ರಿಲಿಯನ್‌ಗೂ ಹೆಚ್ಚು ಮೌಲ್ಯದ ವಹಿವಾಟುಗಳನ್ನು ಪ್ರಕ್ರಿಯೆಗೊಳಿಸಿದೆ. ಇದು 2016ರಲ್ಲಿ ಯುಪಿಐ ಪ್ರಾರಂಭವಾದ ಸಮಯದಿಂದ ದಾಖಲೆಯ ಹೆಚ್ಚಳ.

ಯುಪಿಐ ಮತ್ತೊಮ್ಮೆ ಅಸಾಧಾರಣ ಮೈಲಿಗಲ್ಲನ್ನು ದಾಟಿದೆ, ಈ ಬಾರಿ ವಹಿವಾಟಿನ ಮೌಲ್ಯಗಳಲ್ಲಿ ರೂ. 10 ಟ್ರಿಲಿಯನ್ ಮಾರ್ಕ್ ಅನ್ನು ದಾಟಿದೆ ಮತ್ತು ಮೇ 2022ರಲ್ಲಿ ಸಂಖ್ಯೆಯ ವಿಷಯದಲ್ಲಿ 5.95 ಬಿಲಿಯನ್ ವಹಿವಾಟುಗಳನ್ನು ದಾಟಿದೆ. ಯುಪಿಐ ಅಳವಡಿಕೆಯಲ್ಲಿ ಮಹತ್ವದ ಏರಿಕೆಯನ್ನು ನೋಡಲು ನಾವು ಸಂತೋಷಪಡುತ್ತೇವೆ. ಕಳೆದ ಎರಡು ವರ್ಷಗಳಲ್ಲಿ ಸಾಂಕ್ರಾಮಿಕ ರೋಗವು ವೇಗವರ್ಧಕವಾಗಿ ಕಾರ್ಯನಿರ್ವಹಿಸುತ್ತಿದೆ" ಎಂದು ಗ್ರಾಮೀಣ ಫಿನ್‌ಟೆಕ್ ಕಂಪನಿ ಸ್ಪೈಸ್ ಮನಿ ಸಂಸ್ಥಾಪಕ ದಿಲೀಪ್ ಮೋದಿ ಹೇಳಿದ್ದಾರೆ.

ಇದಲ್ಲದೆ, ಮೇ ತಿಂಗಳಲ್ಲಿ ಪ್ರಕ್ರಿಯೆಗೊಳಿಸಿದ ವಹಿವಾಟುಗಳ ಸಂಖ್ಯೆ 5.95 ಬಿಲಿಯನ್ ಆಗಿದೆ, ಇದು ಪಾವತಿ ವೇದಿಕೆಗೆ ಒಂದು ಮೈಲಿಗಲ್ಲು, ಮಾರ್ಚ್‌ನಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಫೀಚರ್ ಫೋನ್‌ಗಳಿಗಾಗಿ ಯುಪಿಐ ಅನ್ನು ಪ್ರಾರಂಭಿಸಿದೆ ಎಂಬುದು ಗಮನಿಸಬೇಕಾದ ಸಂಗತಿ. ಇದರಿಂದ ಫೀಚರ್ ಫೋನ್‌ಗಳ 400 ಮಿಲಿಯನ್ ಬಳಕೆದಾರರನ್ನು ಭಾರತದ ಸ್ವದೇಶಿ ಪಾವತಿ ಜಾಲದ ಡೊಮೇನ್ ಅಡಿಯಲ್ಲಿ ತರಲು ಸಾಧ್ಯವಾಗಿದೆ.

### 'ಆಜಾದಿ ಕಾ ಅಮೃತ್ ಮಹೋತ್ಸವ್' ವಿನ್ಯಾಸದ ವಿಶೇಷ ನಾಣ್ಯ ಬಿಡುಗಡೆ

ಪ್ರಧಾನಿ ನರೇಂದ್ರ ಮೋದಿ ಇಂದು 1, 2, 5, 10 ಮತ್ತು 20 ರೂಪಾಯಿಗಳ ವಿಶೇಷ ಸರಣಿಯ ನಾಣ್ಯಗಳನ್ನು ಬಿಡುಗಡೆ ಮಾಡಿದರು. ಈ ವಿಶೇಷ ಸರಣಿಯ ನಾಣ್ಯಗಳು 'ಆಜಾದಿ ಕಾ ಅಮೃತ್ ಮಹೋತ್ಸವ್' ಲೋಗೋದ ಥೀಮ್ ಅನ್ನು ಹೊಂದಿದೆ ಮತ್ತು ದೃಷ್ಟಿಹೀನ ವ್ಯಕ್ತಿಗಳಿಗೆ ಸುಲಭವಾಗಿ ಗುರುತಿಸಬಹುದಾಗಿದೆ. 'ಆಜಾದಿ ಕಾ ಅಮೃತ್ ಮಹೋತ್ಸವ್' ವಿನ್ಯಾಸದೊಂದಿಗೆ ಹೊರ ತರಲಾಗಿರುವ ರೂ. 1, 2, 5, 10 ಮತ್ತು 20 ಮುಖಬೆಲೆಯ ನಾಣ್ಯಗಳು ಸ್ಮರಣಾರ್ಥ ನಾಣ್ಯಗಳಲ್ಲ. ಇವು ಚಲಾವಣೆಯಲ್ಲಿ ಇರಲಿವೆ. "ಈ ಹೊಸ ಸರಣಿಯ ನಾಣ್ಯಗಳು ಅಮೃತ್ ಕಾಲ್ ಗುರಿಯನ್ನು ಜನರಿಗೆ ನೆನಪಿಸುತ್ತವೆ ಮತ್ತು ದೇಶದ ಅಭಿವೃದ್ಧಿಗೆ ಕೆಲಸ ಮಾಡಲು ಜನರನ್ನು ಪ್ರೇರೇಪಿಸುತ್ತವೆ" ಎಂದು ಹಣಕಾಸು ಸಚಿವಾಲಯ ಹೇಳಿದೆ.




'ಐಕಾನಿಕ್ ವೀಕ್ ಸೆಲೆಬ್ರೇಷನ್' ಭಾಗವಾಗಿ ಮೋದಿ ಅವರು 12 ಸರ್ಕಾರಿ ಯೋಜನೆಗಳ ಕ್ರೆಡಿಟ್–ಲಿಂಕ್ಡ್ ಪೋರ್ಟಲ್ 'ಜನ್ ಸಮರ್ಥ್ ಪೋರ್ಟಲ್' ಅನ್ನು ಸಹ ಪ್ರಾರಂಭಿಸಿದ್ದಾರೆ. ಈ ಪೋರ್ಟಲ್ ರಾಷ್ಟ್ರದ ಯುವಜನತೆ ಮತ್ತು ಸ್ಟಾರ್ಟಪ್ ಪರಿಸರ ವ್ಯವಸ್ಥೆಗೆ ಸಹಾಯ ಮಾಡಲಿದೆ ಎಂದು ಪ್ರಧಾನಿ ಹೇಳಿದ್ದಾರೆ. ಈ ಪೋರ್ಟಲ್ ವಿದ್ಯಾರ್ಥಿಗಳು, ರೈತರು, ಉದ್ಯಮಿಗಳು, ಎಂಎಸ್‌ಎಂಇ ಉದ್ಯಮಿಗಳ ಜೀವನವನ್ನು ಸುಧಾರಿಸುತ್ತದೆ ಮತ್ತು ಅವರ ಕನಸುಗಳನ್ನು ನನಸಾಗಿಸಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದ್ದಾರೆ. ಈ ಪ್ರತಿಯೊಂದು ಯೋಜನೆಗಳನ್ನು ಪೋರ್ಟಲ್‌ನಲ್ಲಿ ಪ್ರದರ್ಶಿಸಲಾಗುವುದು ಎಂದು ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th JUNE 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 15-06-2022



## ಸತ್ಯೇಂದ್ರ ನಾಥ್ ಬೋಸ್ ಅವರಿಗೆ ಸಮರ್ಪಿತಗೊಂಡ ಡೂಡಲ್



ಸರ್ಚ್ ಎಂಜಿನ್ ಗೂಗಲ್‌ನ ಡೂಡಲ್ ಇಂದು ಅತ್ಯಂತ ವಿಶೇಷವಾಗಿದೆ. ಭಾರತೀಯ ಭೌತಶಾಸ್ತ್ರಜ್ಞ ಮತ್ತು ಗಣಿತಶಾಸ್ತ್ರಜ್ಞ ಸತ್ಯೇಂದ್ರ ನಾಥ್ ಬೋಸ್ ಅವರಿಗೆ ಸಮರ್ಪಿತಗೊಂಡ ಡೂಡಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ಬೋಸ್–ಐನ್‌ಸ್ಟೈನ್ ಕಂಡೆನ್ಸೇಟ್‌ಗೆ ನೀಡಿದ ಕೊಡುಗೆಗಾಗಿ ಅವರಿಗೆ ಇಂದು ಗೌರವ ಸಲ್ಲಿಸಲಾಗಿದೆ.

1924ರ ಜೂನ್ 4ರಂದು ಸತ್ಯನಾಥ್ ಬೋಸ್ ಅವರು ಆಲ್ಬರ್ಟ್ ಐನ್‌ಸ್ಟೈನ್‌ಗೆ ತಮ್ಮ ಕ್ವಾಂಟಮ್ ಫಾರ್ಮುಲೇಷನ್‌ಗಳನ್ನು ಕಳುಹಿಸಿದರು. ಆಲ್‌ಬರ್ಟ್ ಇದನ್ನು ಕ್ವಾಂಟಮ್ ಮೆಕ್ಯಾನಿಕ್ಸ್‌ನಲ್ಲಿ ಗಮನಾರ್ಹ ಆವಿಷ್ಕಾರವೆಂದು ಪರಿಗಣಿಸಿದರು.

ಸತ್ಯೇಂದ್ರ ನಾಥ್ ಬೋಸ್ ಅವರು ಶೈಕ್ಷಣಿಕ ಕ್ಷೇತ್ರದಿಂದ ತಮ್ಮ ಸಾಧನೆಯ ಪ್ರಯಾಣವನ್ನು ಪ್ರಾರಂಭಿಸಿದರು. 1917ರ ಅಂತ್ಯದ ವೇಳೆಗೆ, ಬೋಸ್ ಭೌತಶಾಸ್ತ್ರದ ಕುರಿತು ಉಪನ್ಯಾಸಗಳನ್ನು ನೀಡಲು ಪ್ರಾರಂಭಿಸಿದರು. ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ಲ್ಯಾಂಕ್‌ನ ವಿಕಿರಣ ಸೂತ್ರವನ್ನು ಕಲಿಸುವಾಗ, ಅವರು ಕಣಗಳನ್ನು ಎಣಿಸುವ ವಿಧಾನವನ್ನು ಪ್ರಶ್ನಿಸಿದರು ಮತ್ತು ತಮ್ಮದೇ ಆದ ಸಿದ್ಧಾಂತಗಳೊಂದಿಗೆ ಪ್ರಯೋಗವನ್ನು ಪ್ರಾರಂಭಿಸಿದರು. ಅವರು ತಮ್ಮ ಸಂಶೋಧನೆಗಳನ್ನು 'Planck's Law and the Hypothesis of Light Quanta' ಎಂಬ ವರದಿಯಲ್ಲಿ ದಾಖಲಿಸಿದ್ದಾರೆ ಮತ್ತು ಅದನ್ನು ದಿ ಫಿಲಾಸಫಿಕಲ್ ಮ್ಯಾಗಜೀನ್ ಎಂಬ ಪ್ರಮುಖ ವಿಜ್ಞಾನ ಜರ್ನಲ್‌ಗೆ ಕಳುಹಿಸಿದರು. ಆದರೆ ಆ ಸಂಶೋಧನೆಯನ್ನು ತಿರಸ್ಕರಿಸಲಾಯಿತು. ಆ ಕ್ಷಣದಲ್ಲಿ, ಅವರು ತಮ್ಮ ದಾಖಲೆಯನ್ನು ಆಲ್‌ಬರ್ಟ್ ಐನ್‌ಸ್ಟೈನ್‌ಗೆ ಕಳುಹಿಸಿಕೊಡುವ ದಿಟ್ಟ ನಿರ್ಧಾರವನ್ನು ಮಾಡಿದರು.

ಐನ್‌ಸ್ಟೈನ್‌ನ ಈ ಆವಿಷ್ಕಾರದ ಮಹತ್ವವನ್ನು ಗುರುತಿಸಿದರು ಮತ್ತು ಶೀಘ್ರದಲ್ಲೇ ಬೋಸ್‌ನ ಸೂತ್ರವನ್ನು ವ್ಯಾಪಕ ಶ್ರೇಣಿಯ ವಿದ್ಯಮಾನಗಳಿಗೆ ಅನ್ವಯಿಸಿದರು. ಬೋಸ್ ಅವರ ಸೈದ್ಧಾಂತಿಕ ದಾಖಲೆ ಕ್ವಾಂಟಮ್ ಸಿದ್ಧಾಂತದಲ್ಲಿನ ಪ್ರಮುಖ ಸಂಶೋಧನೆಗಳಲ್ಲಿ ಒಂದಾಗಿದೆ. ಭಾರತ ಸರ್ಕಾರವು ಭೌತಶಾಸ್ತ್ರಕ್ಕೆ ಬೋಸ್ ಅವರ ಅಪಾರ ಕೊಡುಗೆಯನ್ನು ಗುರುತಿಸಿ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣವನ್ನು ನೀಡಿದೆ.

## 2026ರಲ್ಲಿ ಓಡಲಿದೆ ಭಾರತದ ಮೊದಲ ಬುಲೆಟ್ ರೈಲು

2026ರಲ್ಲಿ ಗುಜರಾತ್‌ನ ಸೂರತ್ ಮತ್ತು ಬಿಲಿಮೋರಾ ನಡುವೆ ದೇಶದ ಮೊದಲ ಬುಲೆಟ್ ರೈಲು ಓಡಿಸುವ ಗುರಿಯನ್ನು ಸಾಧಿಸುವ ವಿಶ್ವಾಸವಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ವೈಷ್ಣವ್ ಅವರು ಸರ್ಕಾರದ ಮಹತ್ವಾಕಾಂಕ್ಷೆಯ ಅಹಮದಾಬಾದ್–ಮುಂಬೈ ಬುಲೆಟ್ ರೈಲು ಯೋಜನೆಯ ಪ್ರಗತಿಯನ್ನು ಪರಿಶೀಲಿಸಲು ಸೂರತ್‌ಗೆ ಆಗಮಿಸಿದ್ದರು.

ಅಹಮದಾಬಾದ್ ಮತ್ತು ಮುಂಬೈ ನಡುವೆ ಬುಲೆಟ್ ರೈಲಿಗೆ ಮೂಲಸೌಕರ್ಯ ನಿರ್ಮಾಣದಲ್ಲಿ ಉತ್ತಮ ಪ್ರಗತಿ ಕಂಡುಬಂದಿದ್ದು, ಕಾಮಗಾರಿಯು ಶರವೇಗದಲ್ಲಿ ನಡೆಯುತ್ತಿದೆ ಎಂದಿದ್ದಾರೆ. "ನಾವು 2026ರಲ್ಲಿ ಸೂರತ್ ಮತ್ತು ಬಿಲಿಮೊರಾ ನಡುವೆ ಮೊದಲ ಬುಲೆಟ್ ರೈಲು ಓಡಿಸುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಪ್ರಗತಿಯು ತುಂಬಾ ಉತ್ತಮವಾಗಿದೆ ಮತ್ತು ಆ ಹೊತ್ತಿಗೆ ರೈಲು ಓಡಿಸುವ ವಿಶ್ವಾಸವಿದೆ" ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.



ಈ ಯೋಜನೆಯು ಅಹಮದಾಬಾದ್ ಮತ್ತು ಮುಂಬೈ ನಡುವೆ ಬುಲೆಟ್ ಟ್ರೈನ್ ಅನ್ನು ಹೈ ಸ್ಪೀಡ್ ರೈಲ್ (HSR) ಕಾರಿಡಾರ್‌ನಲ್ಲಿ 320 kmph ವೇಗದಲ್ಲಿ 508 ಕಿಮೀ ಮತ್ತು 12 ನಿಲ್ದಾಣಗಳನ್ನು ಕ್ರಮಿಸುವ ಗುರಿಯನ್ನು ಹೊಂದಿದೆ. ಈ ರೈಲು ಎರಡು ನಗರಗಳ ನಡುವಿನ ಪ್ರಯಾಣದ ಸಮಯವನ್ನು ಪ್ರಸ್ತುತ ಆರು ಗಂಟೆಗಳಿಂದ ಸುಮಾರು ಮೂರು ಗಂಟೆಗಳವರೆಗೆ ಕಡಿಮೆ ಮಾಡುವ ನಿರೀಕ್ಷೆಯಿದೆ.

ಜಪಾನ್ ಇಂಟರ್‌ನ್ಯಾಷನಲ್ ಕೋಆಪರೇಷನ್ ಏಜೆನ್ಸಿ (JICA) ಯೋಜನಾ ವೆಚ್ಚದ 81 ಪ್ರತಿಶತ ಹಣವನ್ನು 1.1 ಲಕ್ಷ ಕೋಟಿ ಎಂದು ಅಂದಾಜಿಸಿದೆ. ಬುಲೆಟ್ ರೈಲು ಯೋಜನೆಗೆ 61 ಕಿ.ಮೀ ಮಾರ್ಗದಲ್ಲಿ ಪಿಲ್ಲರ್‌ಗಳನ್ನು ಹಾಕಲಾಗಿದ್ದು, ಸುಮಾರು 150 ಕಿ.ಮೀ ವ್ಯಾಪ್ತಿಯಲ್ಲಿ ಕಾಮಗಾರಿ ನಡೆಯುತ್ತಿದೆ ಎಂದು ವೈಷ್ಣವ್ ಹೇಳಿದ್ದಾರೆ.

*1ನೇ ಪುಟದಿಂದ...*

## ಎಲ್ಲರನ್ನು ಜೋಡಿಸುವುದೇ ಸಂಘಕಾರ್ಯ




ಧರ್ಮದ ಸಂರಕ್ಷಣೆ ಎರಡು ರೀತಿಯದ್ದು, ಒಂದು ಆಕ್ರಮಣದಿಂದ ತಪ್ಪಿಸಿಕೊಳ್ಳುವುದು, ಅದಕ್ಕಾಗಿ ಬಲಿದಾನವೂ ನಡೆಯುತ್ತದೆ, ಯುದ್ಧವೂ ನಡೆಯುತ್ತದೆ. ಎರಡನೇಯದ್ದು ಧರ್ಮವನ್ನು ಆಚರಣೆಯಲ್ಲಿ ತರುವುದು." ಎಂದರು.

"ನಾವು ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಮುಂದೆ ಸಾಗಬೇಕಿದೆ. ಉದಾಹರಣೆಗೆ ಗ್ಯಾನವಾಪಿಯ ವಿಚಾರ ಬಂದಿದೆ. ಇಲ್ಲಿ ಇತಿಹಾಸದ ಸಾಕ್ಷಿಯಂತೂ ಇದೆ, ಅದನ್ನು ನಾವು ಬದಲಾಯಿಸಲು ಸಾಧ್ಯವಿಲ್ಲ. ಅದು ಇವತ್ತು ಬದುಕಿರುವ ಹಿಂದು, ಮುಸಲ್ಮಾನರಿಂದ ನಡೆದ ಇತಿಹಾಸವಲ್ಲ, ಹಿಂದೆಂದೋ ಆದದ್ದು. ಇಸ್ಲಾಂ ಹೊರಗಿನಿಂದ ಆಕ್ರಮಣ ಮಾಡುತ್ತಾ ಬಂದಾಗ, ಭಾರತದ ಸ್ವತಂತ್ರ ಸೇನಾನಿಗಳ ಶ್ರದ್ಧಾ ಭಂಗಕ್ಕಾಗಿ ದೇವಸ್ಥಾನವನ್ನು ಒಡೆದರು. ಆ ರೀತಿ ದೇಶಾದ್ಯಂತ ಸಾವಿರಾರು ಘಟನೆಗಳಾಗಿದೆ. ಈಗ ಹಿಂದು ಮುಸಲ್ಮಾನ ನಡುವೆ ಮನಸ್ತಾಪಕ್ಕೆ ಕಾರಣವಾಗಬಾರದು. ಹಿಂದು ಮುಸಲ್ಮಾನರು ಒಟ್ಟಿಗೆ ಕೂತು ಈ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕಿದೆ. ಹಾಗಾಗದಿದ್ದಾಗ ಕೋರ್ಟಿಗೆ ಹೋಗಬೇಕಾಗಬಹುದು, ಆಗ ಕೋರ್ಟಿನ ನಿರ್ಣಯವನ್ನು ನಾವು ಒಪ್ಪಬೇಕು. ನಮ್ಮ ಸಂವಿಧಾನ ಸಮ್ಮತ ನ್ಯಾಯವ್ಯವಸ್ಥೆಯನ್ನು ಪವಿತ್ರ, ಸರ್ವ ಶ್ರೇಷ್ಠವೆಂದು ಪರಿಗಣಿಸಿ ನಾವು ಪಾಲಿಸಬೇಕಿದೆ. ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಅಶ್ಫಾಕ್ ಉಲ್ಲಾ ಖಾನ್‌ರಂತಹ ಮಹಾನ್ ಹೋರಾಟಗಾರರಿದ್ದಾರೆ. ಹಾಗಾಗಿ ಅವರಿಗೂ ಭಾರತ ಮಾತೃಭೂಮಿಯಾಗಿದೆ." ಎಂದರು.

ಸಮಾರಂಭದಲ್ಲಿ ಹೈದರಾಬಾದಿನ ರಾಮಚಂದ್ರ ಮಿಷನ್ನಿನ ಶ್ರೀ ಕಮಲೇಶ್ ಪಟೇಲ್ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಅಲ್ಲದೆ ಸಮಾರಂಭದಲ್ಲಿ ಸ್ವಯಂಸೇವಕರು ಆಕರ್ಷಕವಾದ ಶಾರೀರಿಕ ಪ್ರದರ್ಶನವನ್ನು ನಡೆಸಿದರು.

## ಸಾಗರ ಉತ್ಪನ್ನ ರಫ್ತನ್ನು ರೂ. 1 ಲಕ್ಷ ಕೋಟಿಗೆ ದ್ವಿಗುಣಗೊಳಿಸುವ ಗುರಿ



ಮುಂದಿನ ಐದು ವರ್ಷಗಳಲ್ಲಿ ಸಾಗರ ಉತ್ಪನ್ನ ರಫ್ತುಗಳನ್ನು 50,000 ಕೋಟಿಯಿಂದ 1 ಲಕ್ಷ ಕೋಟಿ ರೂಪಾಯಿಗಳಿಗೆ ದ್ವಿಗುಣಗೊಳಿಸುವ ಗುರಿಯನ್ನು ದೇಶ ಹೊಂದಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಇಂದು ಕೊಚ್ಚಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಗೋಯಲ್, ಸುಸ್ಥಿರ ಮೀನುಗಾರಿಕೆ, ಗುಣಮಟ್ಟ ಮತ್ತು ವೈವಿಧ್ಯತೆಯನ್ನು ಖಾತರಿಪಡಿಸುವುದು, ಕರಾವಳಿ ಹಡಗು ಮತ್ತು ಜಲಚರಗಳನ್ನು ಉತ್ತೇಜಿಸುವ ಮೂಲಕ ಮತ್ತು ಇಡೀ ಮೀನುಗಾರಿಕೆ ಪರಿಸರ ವ್ಯವಸ್ಥೆಯನ್ನು ಬೆಂಬಲಿಸುವ ಮೂಲಕ ಈ ಗುರಿಯನ್ನು ಸಾಧಿಸಲಾಗುವುದು ಎಂದು ಹೇಳಿದರು.

ಯುಎಇ ಮತ್ತು ಆಸ್ಟ್ರೇಲಿಯಾದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲಾಗಿದೆ. ಯುಕೆ ಮತ್ತು ಕೆನಡಾದೊಂದಿಗೆ ಅಂತಹ ಒಪ್ಪಂದಕ್ಕೆ ಮಾತುಕತೆಗಳು ಪ್ರಗತಿಯಲ್ಲಿವೆ ಎಂದು ಅವರು ಹೇಳಿದರು. ಈ ತಿಂಗಳ 17ರಂದು ಬ್ರಸೆಲ್ಸ್‌ನಲ್ಲಿ ಯುರೋಪಿಯನ್ ಯೂನಿಯನ್ನೊಂದಿಗೆ ಈಖಿಂ ಅನ್ನು ತಲುಪುವ ಮಾತುಕತೆಗಳು ಪ್ರಾರಂಭವಾಗಲಿವೆ ಎಂದು ಸಚಿವರು ಹೇಳಿದರು. ದೇಶದ ರಫ್ತುದಾರರಿಗೆ ಮಾರುಕಟ್ಟೆ ಪ್ರವೇಶ ಮತ್ತು ಹೊಸ ಅವಕಾಶಗಳನ್ನು ಒದಗಿಸುವ ಪ್ರಯತ್ನ ನಡೆದಿದೆ, ಇದು ಮೀನುಗಾರರಿಗೆ ಉತ್ತಮ ಭವಿಷ್ಯವನ್ನು ನೀಡುತ್ತದೆ ಎಂದು ಅವರು ಹೇಳಿದರು.

ಗೋಯಲ್ ಅವರು ಕೇರಳ, ತಮಿಳುನಾಡು, ಪುದುಚೇರಿ ಮತ್ತು ಕರ್ನಾಟಕದ ಮೀನುಗಾರರ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿದರು. ಸಮುದ್ರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರದ ಕಚೇರಿಯನ್ನು ಕೊಚ್ಚಿಯಿಂದ ಸ್ಥಳಾಂತರಿಸುವ ಸಾಧ್ಯತೆಯನ್ನು ಅವರು ತಳ್ಳಿಹಾಕಿದರು. ಇದಕ್ಕೂ ಮುನ್ನ ಸಚಿವರು ಕೊಚ್ಚಿಯಲ್ಲಿರುವ ಎಂಪಿಇಡಿಎ ಕಚೇರಿಯಲ್ಲಿ ಸಮುದ್ರ ಉತ್ಪನ್ನಗಳ ರಫ್ತುದಾರರು ಮತ್ತು ರಬ್ಬರ್ ಉದ್ಯಮದ ಪಾಲುದಾರರನ್ನು ಭೇಟಿ ಮಾಡಿದರು.

**ಓದುಗರೇ ಗಮನಿಸಿ**
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.